ಓ. ಎಸ್. ನಂಃ 54-2008

ಡಿ. ಡಬ್ಲ್ಯೂಃ 3

ದಿಃ 08-04-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಎಂ.ಜಿ.ಎಚ್. ಪ್ರತಿವಾದಿ ಪರ ವಕೀಲರಿಂದ.

ಈ ದಾವೆಯಲ್ಲಿ ನಾನು ಸಾಕ್ಷಿದಾರನಾಗಿದ್ದು, ಇಂದು ನನ್ನ ಮೌಖಿಕ ಸಾಕ್ಷ್ಯದ ಬದಲು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲ ವಿಷಯಗಳು ನಿಜ ವ ಸತ್ಯ ಇರುತ್ತವೆ

ಸಾಕಿಯು ನಿಡಿ-16 ರಲ್ಲಿ ತನ್ನ ಎರಡು ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಡಿ-16 (ಎ) ಮತ್ತು (ಬಿ) ಎಂದು ಗುರುತಿಸಲಾಯಿತು.

ಪಾಟಿಸವಾಲುಃ ಶ್ರೀ ಜಿ.ಎಸ್.ಎ. ವಾದಿ ಪರ ವಕೀಲರಿಂದ.

ನಾನು ರಿ.ಸನಂ. 11 ಆಸ್ತಿ ವಿವಾದ ಸಂಬಂಧವಾಗಿ ಸಹಿಯನ್ನು ಮಾಡಿರುತ್ತೇನೆ. ಆಸ್ತಿ ಖರೀದಿಯನ್ನು ಭೋಜನಗೌಡ ಪ್ರತಿವಾದಿ ನಂ. 3 ರವರು ಹಿಡಿದಿರುತ್ತಾರೆ. ಸದರಿ ಆಸ್ತಿ ಖರೀದಿಯನ್ನು ಯಲ್ಲನಗೌಡ ಪಾಟೀಲ ಇವರು ಕೊಟ್ಟಿರುತ್ತಾರೆ. ಸದರಿ ಆಸ್ತಿ ಖರೀದಿಯು ರೂ. 1,62,000/-ಗಳಿಗೆ ಆಗಿರುತ್ತದೆ. ಖರೀದಿ ಆದ ದಿನ ಹಣವನ್ನು ಕೊಟ್ಟಿರುವುದಿಲ್ಲ. ಖರೀದಿಯು ಯಾವ ದಿನಾಂಕ ಹಾಗೂ ತಿಂಗಳಂದು ಆಗಿರುತ್ತದೆ ಎಂದು ಹೇಳಲು ಬರುವುದಿಲ್ಲ. ಸಾಕ್ಷಿಯು ಮುಂದುವರೆದು 2007 ರಲ್ಲಿ ಆಗಿರುತ್ತದೆ ಎಂದು ಹೇಳುತ್ತಾರೆ. ಸದರಿ ಆಸ್ತಿ ಖರೀದಿ ಕುರಿತು ಸಂಚಕಾರ ಪತ್ರ ಆಗಿರುವ ಬಗ್ಗೆ ನನಗೆ ನೆನಪಿರುವುದಿಲ್ಲ

2. ಖರೀದಿ ದಿನ 06 ಜನ ಬಂದಿರುತ್ತೇವೆ. ಖರೀದಿ ಪತ್ರವನ್ನು ಯಾರು ಬರೆದಿರುತ್ತಾರೆ ಎಂದು ನನಗೆ ನೆನಪು ಇರುವುದಿಲ್ಲ. ಖರೀದಿ ಪತ್ರಕ್ಕೆ ಶಿಗ್ಗಾಂವವಿಯ ಉಪ ನೋಂಣಿ ಅಧಿಕಾರಿ ಕಚೇರಿಯಲ್ಲಿ ಸಹಿ ಮಾಡಿರುತ್ತೇವೆ. ನನ್ನ ಜೊತೆ ಬೇರೆ ಯಾರು ಖರೀದಿ ಪತ್ರಕ್ಕೆ ಸಹಿ ಮಾಡಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ಖರೀದಿ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಖರೀದಿ ಪತ್ರಕ್ಕೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಖರೀದಿ ಹಿಡಿದಿರುವ ಆಸ್ತಿಯು 2 ನೇ ಪ್ರತಿವಾದಿಗೆ ಹೇಗೆ ಬಂದಿರುತ್ತದೆ ಎಂದು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ಸದರಿ ಆಸ್ತಿಯು

ವಾದಿಯರ ಮಾಲ್ಕಿ ವಹಿವಾಟ ಆಸ್ತಿ ಎಂದರೆ ಸರಿ. ಪ್ರತಿವಾದಿ ನಂ. 3 ನೇದವರು ಕದರಮಂಡಲಗಿ ಊರಿನವರು ಇರುತ್ತಾರೆ. ನನ್ನ ಊರು ಹಾನಗಲ್ ತಾಲೂಕಿನ ನೀರಲಗಿ ಇರುತ್ತದೆ. 3 ನೇ ಪ್ರತಿವಾದಿ ಹೆಂಡತಿ ಶಾಲೆ ಶಿಕ್ಷಕಿ ಇರುವುದರಿಂದ 3 ನೇ ಪ್ರತಿವಾದಿಯ ಪರಿಚಯ ಇರುತ್ತದೆ. 3 ನೇ ಪ್ರತಿವಾದಿ ಹಾಗೂ ಅವರ ಹೆಂಡತಿ ನಮಗೆ ತುಂಬಾ ಬೇಕಾದವರು ಎಂದರೆ ಸರಿ. 2 ನೇ ಪ್ರತಿವಾದಿ, 3 ನೇ ಪ್ರತಿವಾದಿ, 3 ನೇ ಪ್ರತಿವಾದಿ ಹೆಂಡತಿ ಹಾಗೂ ನಾನು ಸೇರಿ ಖೊಟ್ಟಿ ಖರೀದಿ ಪತ್ರವನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಸದರಿ ಆಸ್ತಿಯನ್ನು ಮಾರಾಟ ಮಾಡಲು ಯಾವುದೇ ಹಕ್ಕು ವ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ನಂ. 7 ರಿಂದ 10 ಪರ ವಕೀಲರು ಸಮಯ ಕೋರಿದ್ದರಿಂದ ಪಾಟೀಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

Sd/-08-04-2022
ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.